ಆಧುನಿಕ ಉಪಕರಣಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

ಆಧುನಿಕ ಉಪಕರಣವಾದ ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್ (Electronic Total Station) ನಿಂದ ಬಯಲು ಪ್ರದೇಶದಲ್ಲಿ ಸುಮಾರು 200 ಎಕರೆ ಜಮೀನನ್ನು ಒಂದು ದಿನದಲ್ಲಿ ಅಳತೆ ಮಾಡಬಹುದಾಗಿರುತ್ತದೆ.

49 ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ) ಕಳೆದ 3 ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು; ಸಂಪೂರ್ಣ ವಿವರಗಳನ್ನು ನೀಡುವುದು;

ಮೂರು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಮಂಜೂರಾಗಿರುವ ಏತ ನೀರಾವರಿಗಳ ಕಾಮಗಾರಿಗಳು ಪೂರ್ಣವಾಗಿವೆಯೇ;

ಪೂರ್ಣಗೊಂಡಿಲ್ಲ

ಇ) ಮಂಜೂರಾದ ಏತ ನೀರಾವರಿಗಳಿಗೆ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು; ಯೋಜನಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು.

ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಯೋಜನೆಗಳ ಕಾಮಗಾರಿಗಳು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ, ಸದರಿ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರಗಳನ್ನು ನೀಡುವುದು)?

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ. ನಾಡಗೌಡ ವೆಂಕಟರಾವ್ (ಸಿಂಧನೂರು) ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 49ಕ್ಕೆ ಅನುಬಂಧ.

(ರೂ.ಲಕ್ಷಗಳಲ್ಲಿ)

ಕ್ರಸಂ	ಪತ ನೀರಾವರಿ ಯೋಜನೆಯ ಹೆಸರು	ಅಂದಾಜು ಮೊತ್ತ	ಗುತ್ತಿಗೆ ಮೊತ್ತ	ಇದುವರೆಗಿನ ವೆಚ್ಚ	ಅಚ್ಚುಕಟ್ಟು ಕ್ಷೇತ್ರ (ಹೆ.ಗಳಲ್ಲಿ)	ಯೋಜನೆಯನು ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ	ಕಾಮಗಾರಿಯ ಪ್ರಸ್ತುತ ಹಂತ
	2006–07						
1	ಸಾಲಗುಂದಾ	220.00	244.28	110.59	690	ಮೇ–2010	ಜಾಕವೆಲ್‌ಗಾಗಿ ಮಣ್ಣಿನ ಅಗೆತ ಪೂರ್ಣ ಗೊಂಡಿದ್ದು, 1000 ಮೀ ನಷ್ಟು ರೈಜಿಂಗ್ ಮೇನ್‌ಗಾಗಿ ಕೊಳವೆಗಳನ್ನು ಪೂರೈಸಲಾಗಿದೆ. ಹಾಗೂ ಪಂಪಿಂಗ್ ಮಶಿನರಿ ಮತ್ತು ಇತರೆ ಸಾಮಗ್ರಿಗಳು ಪೂರೈಕೆಯಾಗಿರುತ್ತವೆ.
2	ರಾಗಲಪರ್ವಿ	100.00	107.34	54.68	207	ಡಿಸೆಂಬರ–2009	ಜಾಕವೆಲ್ ಕಾಮಗಾರಿ ಪ್ರಗತಿಯಲ್ಲಿದೆ. 150 ಮೀ ಉದ್ದದ ರೈಜಿಂಗ್ ಮೇನ್ ಕೆಲಸ ಬಾಕಿ ಇದೆ. ಪಂಪಿಂಗ್ ಮಶಿನರಿ ಪೂರೈಸಲಾಗಿದ್ದು, ಜೋಡಿಸಬೇಕಾಗಿದೆ.
	2007–08						
1	ರಹಮತ್‌ನಾಳ	92.00	167.45	3.49	195	ಜೂನ್–2010	ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ನೀಡಲಾಗಿದ್ದು, ಗುತ್ತಿಗೆದಾರರಿಗೆ ಕಾರ್ಯಾದೇಶ ಹೊರಡಿಸುವ ಹಂತದಲ್ಲಿದೆ.

2009–10ನೇ ಸಾಲಿನಲ್ಲಿ ಮುಂದುವರಿದ ಕಾಮಗಾರಿಗಳಿಗೆ ನಿರ್ದಿಷ್ಟವಾದ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಮೇಲ್ಕಂಡ ಕಾಮಗಾರಿಗಳು ಮುಂದುವರಿದ ಕಾಮಗಾರಿಗಳಾಗಿರುವುದರಿಂದ ಪ್ರಗತಿಗನುಸಾರವಾಗಿ ಇಡುಗಂಟು ಮೊತ್ತದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.